# ಬಂಧನ ಪ್ರಿಯ ಜೀವಿ!

ಬಿಡುಗಡೆಯ ಬಯಕೆ ಸಕಲ ಜೀವಿಗಳ ಸಹಜ ಆಸೆ. ತನ್ನ ಸುತ್ತ ವ್ಯವಸ್ಥೆ ಕಟ್ಟಿರುವ ಭೌತಿಕ– ಮಾನಸಿಕ ಸಂಬಂಧವಾದ ಎಲ್ಲ ಬಗೆಯ ಕಟ್ಟುಗಳನ್ನು ಕಿತ್ತು ಬಿಸಾಡಿ ಬಯಲಲ್ಲಿ ಬಯಲಾಗುವ ಹೆಬ್ಬಯಕೆಯತ್ತ ಸಾಗುವುದೇ ಜೀವದ ಗುರಿ. ಬಹುಶಃ ಎಲ್ಲ ತತ್ವ ಸಿದ್ಧಾಂತಗಳು ಈ ದಾರಿಯಲ್ಲೇ ಯೋಚಿಸುತ್ತವೆ. ಮತಧರ್ಮಗಳ ಹಿಡಿತದಿಂದ ಬಿಡಿಸಿಕೊಂಡು, ಸಂಸಾರದ ಕಟ್ಟುಗಳನ್ನು ಕಿತ್ತುಕೊಂಡು ಸತ್ಯದ ಶೋಧದ ಬೆನ್ನುಬಿದ್ದ ಸಂತರ– ಅಧ್ಯಾತ್ಮ ಚಿಂತಕರ ಜೀವನಗಾಥೆಗಳು ಈ ಸತ್ಯವನ್ನೇ ಬಯಲು ಮಾಡುತ್ತವೆ. ಅಡಿಗರು ಹೇಳುವಂತೆ 'ಇರುವುದನ್ನು ಬಿಟ್ಟು ಇರದದುರ ಕಡೆ' ಸದಾ ತುಡಿಯುವ ಜೀವ ಚಿತ್ತವೃತ್ತಿಯ ಮುಖ್ಯ ಗುಣವೇ ಸ್ವಾತಂತ್ರ್ಯವನ್ನು ಬಯಸುವುದು.

ಆದರೆ ಈ ಸ್ವಾತಂತ್ರ್ಯ ಸ್ಥಾಪಿತ ಹಿಡಿತಗಳ ಹಿತಾಸಕ್ತಿಗೆ ಭಂಗವನ್ನುಂಟು ಮಾಡುತ್ತದೆ. ಸ್ಥಾಪಿತ ಶಕ್ತಿಗಳನ್ನು ಪ್ರಶ್ನೆ ಮಾಡುವುದು, ಅದರ ನಿಯಮ ಆಚಾರ ಸಂಪ್ರದಾಯಗಳನ್ನು ಉಲ್ಲಂಘಿಸುವುದು; ಆ ಶಕ್ತಿಗಳ ಹಿಡಿತವನ್ನು ಸಡಿಲ ಗೊಳಿಸುವುದು– ಮುಂತಾದ ಸಾಮಾಜಿಕ ಚಲನೆ ಮೂಡಿಸುವಂಥ ಕ್ರಿಯೆಗಳಿಗೆ ಬೀಜ ಹಾಕುವ ಸೋಪಜ್ಞ ಕೆಲಸವನ್ನು ಈ ಸ್ವಾತಂತ್ರ್ಯ ತಂದುಬಿಡುತ್ತದೆ. ಆ ಕಾರಣಕ್ಕೋಸ್ಕರವೇ ಸಾಮಾಜಿಕ ಸ್ಥಾಪಿತ ಶಕ್ತಿಗಳಾದ ಪ್ರಭುತ್ವ ಮತ್ತು ಮತೀಯ ಶಕ್ತಿಗಳು ತಮ್ಮ ಅಗೋಚರ– ಗೋಚರ ನಿಬಂಧನೆಗಳಿಂದ ಕಠೋರವಾದ ಕಬಂದ ಬಾಹುಗಳ ಮೂಲಕ ಜೀವ ಜಗತ್ತನ್ನು ಕಟ್ಟಿಹಾಕುತ್ತದೆ. ಆ ಉಸಿರುಗಟ್ಟಿಸುವ ಬಂಧನದಿಂದ ಹೊರಬರಲಾರದೆ ಜೀವ ನಲುಗುತ್ತದೆ. ಆ ಬಂಧನದ ಬದುಕಿನಲ್ಲಿ ತಾನು– ತನ್ನತನವೆಂಬ ಸ್ವಂತಿಕೆಯನ್ನು ಇಲ್ಲವಾಗಿಸಿಕೊಂಡು ಒಂದು ಬಗೆಯ ಗುಲಾಮಗಿರಿಯ ಜೀವನ ವಿಧಾನಕ್ಕೆ ಒಗ್ಗಿ ಹೋಗುತ್ತದೆ. 'ಬದುಕುವ ಬಗೆಯೇ ಹೀಗೆ' ಎಂಬ ಅಲ್ಪ ತೃಪ್ತಿಯಲ್ಲಿ ಬದುಕು ಸಾಗಿಸಲು ಕಲಿಯುತ್ತದೆ. ಅಥವಾ ಗುಲಾಮಗಿರಿಯ ಕಠೋರ ಕ್ರೌರ್ಯವನ್ನು ನಿರಾಕರಿಸಿ ಸಿಡಿಯುವಂಥ ಸಮಯಕ್ಕಾಗಿ ಕಾಯತೊಡಗುತ್ತದೆ.

ಒಟ್ಟಾರೆ ಅಸಹನೀಯ ಕುದಿತದ ಸ್ಫೋಟಕ್ಕೆ ಅಭಿವ್ಯಕ್ತಿ ನೀಡುವಂತಹ ವ್ಯಕ್ತಿ ಸೂಕ್ತ ಸಮಯವೊಂದರಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ಅವನು ಸ್ವಯಂಭುವಲ್ಲ; ಅವತಾರ ಪುರುಷನಲ್ಲ; ದೇವ ದೂತನೂ ಅಲ್ಲ. ಅವನು ಶತಮಾನಗಳ ಮೌನದ, ತುಳಿತಕ್ಕೊಳಗಾದ, ಬಂಧಿಸಲ್ಪಟ್ಟ ಜನ ಸಮೂಹದ ಸ್ವಾತಂತ್ರ್ಯ ಬಯಕೆಯ ಅಭಿವ್ಯಕ್ತಿ ಸ್ವರೂಪದ ಒಟ್ಟು ಧ್ವನಿ. ಆ ಧ್ವನಿಯ ಮೂಲಕ ಚಿಂತನೆಯ ಹೊಸತನ ಚಿಗುರೊಡೆಯುತ್ತದೆ; ಹೊಸ ಜೀವನ ವಿಧಾನ ರೂಪು ತಳೆಯುತ್ತದೆ. ಅದರ ಆಧಾರದ ಮೇಲೆ ಹೊಸ ಹೊಸ ಸಂಬಂಧಗಳು ಸೃಷ್ಟಿಗೊಳ್ಳುತ್ತವೆ.

ಇಂಥ ಒಡೆದು ಕಟ್ಟುವ ಕ್ರಿಯೆಗಳು ಕಾಲ ಕಾಲಕ್ಕೆ ಆಗುತ್ತಿರುವುದೇ ಒಂದು ಚಲನಶೀಲ ಸಮಾಜದ ವಿಕಾಸದ ಸ್ಥಿತಿ ನಿರಂತರವಾಗಿರಲು ಸಾಧ್ಯವಾಗಿದೆ.

ಮಾನವನ ನಿರಂತರ ಬಂಧನದಿಂದ ಬಿಡುಗಡೆಯಾಗುವ ಬಯಕೆಯ ನಡುವೆಯೂ ಒಂದು ಬಗೆಯ ತನ್ನನ್ನು ತಾನು ಕೂಡಿ ಹಾಕಿ ಕೊಳ್ಳುವಂಥ ಅಥವಾ ಕಟ್ಟಿ ಹಾಕಿಕೊಳ್ಳುವ ಪ್ರವೃತ್ತಿಯೂ ಅವನಲ್ಲಿ ಕೆಲಸ ಮಾಡುತ್ತಾ ಬಂದಿರುವುದನ್ನು ಗಮನಿಸಬಹುದು. ಇದು ಪಾರಮಾರ್ಥಿಕ ಅಥವಾ ಸೈದ್ಧಾಂತಿಕ ನೆಲೆಯ ಬಂಧನವಲ್ಲ. ಇದು ಸರ್ವತ್ರ ಶುದ್ಧ ಲೌಕಿಕ ನೆಲೆಯದ್ದೂ, ವ್ಯಾವಹಾರಿಕ ನೆಲೆಯದ್ದೂ ಆಗಿದೆ. ಇದು ಸಂಪ್ರದಾಯ– ಮತ ಧರ್ಮಾಧಾರಿತ ಕಟ್ಟುಪಾಡುಗಳಿಗೆ ಸಂಬಂಧಿಸಿದ್ದಲ್ಲ, ಒಂದರ್ಥದಲ್ಲಿ ಪ್ರವೃತ್ತಿಯ ಆಜು ಬಾಜುಗಳಲ್ಲಿ ವಿಹರಿಸುವ ಭಾವ ಸಂಬಂಧೀ ನೆಲೆಗಳಲ್ಲಿ ಉತ್ಪನ್ನವಾದ ಬಂಧನದ ಬಯಕೆ, ಪ್ರೀತಿ! ಇದು ಜೀವಿಯೊಂದು ತನ್ನ ಜೀವಕ್ಕಾಗಿ ಮತ್ತೊಂದು ಜೀವ ಸಂಬಂಧದೊಡನೆ ಕಟ್ಟಿ ಹಾಕಿಕೊಳ್ಳುವ ಕ್ರಿಯೆ. ಅತ್ಯಂತ ವಿಸ್ಮಯವೂ ನಿಗೂಢವೂ ಆದ ಪ್ರಕೃತಿಯ ಮತ್ತು ಆ ಪ್ರಕೃತಿಯ ಇತರ ಜೀವಿಗಳ ಬಗೆಗಿರಬಹುದಾದ ಭಯದ ಕಾರಣದಿಂದ ಕಟ್ಟಿಕೊಳ್ಳುವ ಪಂಜರ!

ವ್ಯಕ್ತಿ ತನ್ನ ಸಂಸಾರದಲ್ಲಿ ತನ್ನನ್ನು ಬಂಧಿಸಿಕೊಳ್ಳಲು ಬಯಸುತ್ತಾನೆ; ತನ್ನ ಭಾಷೆ– ಸಂಸ್ಕೃತಿಯೊಡನೆ ಬೆಸೆದುಕೊಳ್ಳಲು ಬಯಸುತ್ತಾನೆ. ಇನ್ನೂ ಪ್ರವೃತ್ತಿ ಮಟ್ಟದಲ್ಲಿ ಪ್ರಿಯಕರ ಪ್ರೇಯಸಿಯ, ಪ್ರೇಯಸಿ ಪ್ರಿಯಕರನ ಬಂಧನವನ್ನು ಅತ್ಯಂತ ಪ್ರೀತಿಯಿಂದ ಬಯಸುತ್ತಾನೆ/ಳೆ. ಮಳೆ ಬಿಸಿಲು ಗಾಳಿಗಳಿಂದ, ದುಷ್ಟ ಮೃಗಗಳಿಂದ, ಕಳ್ಳಕಾಕರಿಂದ ತನ್ನನ್ನು ಮತ್ತು ತನ್ನ ಕುಟುಂಬವನ್ನು ರಕ್ಷಿಸಿಕೊಳ್ಳಲು ಮನೆಯೆಂಬ ಬಂಧನಾ ರೂಪದಲ್ಲಿರಲು ಬಯಸುತ್ತಾನೆ. ಅದೇ ಸ್ವರೂಪ ವಿಸ್ತಾರಗೊಂಡು ರಾಜ್ಯ/ ದೇಶಗಳ ಗಡಿಗಳಲ್ಲಿ ಅಪಾರ ಸೈನ್ಯವನ್ನು ಪೇರಿಸಿ ಬಂಧನದ ರೂಪು ಪಡೆಯುತ್ತದೆ. ಇವೆಲ್ಲಾ ವ್ಯಕ್ತಿ ಮತ್ತು ಸಮಾಜ ಸುರಕ್ಷಿತವಾಗಿ ಬದುಕಲು ಏರ್ಪಡಿಸಿಕೊಂಡಿರುವ ವ್ಯವಸ್ಥೆ ಮಾತ್ರ. ನಿಜವಾದ ಅರ್ಥದ ಬಂಧನಗಳಲ್ಲಿ ಜೀವವನ್ನು, ಮಾನವತ್ವವನ್ನು ತುಳಿಯುವುದೇ ನಿಜವಾದ ಬಂಧನ.

■ **ಶಿಕಾಕು**

## ಮಾತೇ ಮುತ್ತು

★ ತನ್ನನ್ನು ತಾನು ಹೀಯಾಳಿಸಿಕೊಳ್ಳುವುದಾಗಲೀ, ಹೊಗಳಿಕೊಳ್ಳುವುದಾಗಲೀ ಸರಿಯಲ್ಲ, ಸಮಚಿತ್ತವಿರಲಿ.

–ಅಜ್ಞಾತ

★ ಅತ್ಯಾಚಾರಿಗಿಂತಲೂ ಅಭಾಗ್ಯವಂತ ಬೇರಿಲ್ಲ. ಏಕೆಂದರೆ ಆಪತ್ತಿನ ಸಮಯದಲ್ಲಿ ಅವನ ಜತೆ ಯಾರೂ ಸಹಕರಿಸುವುದಿಲ್ಲ.

–ಶೇಖ್ ಸಾದಿ

★ ನಿಮಗಿಂತ ಬೇರೆಯವರು ಕುರೂಪಿಗಳು, ಕಳಪೆಯವರು ಎಂದು ನೀವು ಯೋಚಿಸಿದ ಕೂಡಲೇ ನೀವೇ ಕುರೂಪಿಗಳಾಗುತ್ತೀರಿ.

–ಶೇಕ್ಸ್‌ಪಿಯರ್

★ ದುರ್ಬಲ ಮನಸ್ಸಿನ ಮನುಷ್ಯ ವಿಷಯಗಳನ್ನು ದೊಡ್ಡದು ಮಾಡುತ್ತಾನೆ. ಆದರೆ ಅವನಿಂದ ದೊಡ್ಡದನ್ನು ಪಡೆಯಲಾಗುವುದಿಲ್ಲ.

–ಆಲೂರು ವೆಂಕಟರಾಯರು

★ ಶಾಂತಿಚಿತ್ತರು ಜ್ಞಾನಿಗಿಂತ ಹೆಚ್ಚು ಸುಖಿ.

–ಥಾಮಸ್ ಕೆಂಪಿಸ್

★ ಇನ್ನೊಬ್ಬರು ನಿಂದಿಸಬಹುದಾದ ಕಾರ್ಯವನ್ನು ವಿವೇಕಿಯು ಮಾಡಬಾರದು. ತನ್ನ ಮಡದಿಯಂತೆಯೇ ಪರರ ಮಡದಿಯೂ ಎಂದು ತಿಳಿದು ಅವಳ ಮಾನವನ್ನು ರಕ್ಷಿಸಬೇಕು.

–ರಾಮಾಯಣ

★ ಶೀಲ ಉಳ್ಳವನು ಸರ್ವವನ್ನೂ ಜಯಿಸುವನು.

–ಮಹಾಭಾರತ

★ ನಮ್ಮ ಶತ್ರುಗಳು ತೊಂದರೆಗೆ ಈಡಾಗುವುದಾದಲ್ಲಿ ತಾವು ಕಷ್ಟ ಅನುಭವಿಸಲು ಅನೇಕರು ಸಿದ್ಧರಾಗಿರುತ್ತಾರೆ!

–ಈಸೋಫ

★ ವ್ಯಕ್ತಿಗತ ಒಳಶಾಂತಿ ಇಲ್ಲದೆ ವಿಶ್ವಶಾಂತಿ ಬರಲಾರದು, ವಿಶ್ವಶಾಂತಿ ಒಳಶಾಂತಿಗಾಗಿ ಕಾಯಲಾರದು. ಎರಡೂ ಸಾಧನೆ ಏಕಕಾಲದಲ್ಲಿ ಆಗಬೇಕು.

–ರಬ್ಬಿ ಲಿಯೊನೆಲ್ ಬ್ಲೂ

★ ವಿದ್ಯೆಯೇ ಬೆಳಕು; ಅದಿಲ್ಲದ್ದೇ ಕತ್ತಲು.

–ರಷ್ಯಾ ಗಾದೆ

★ ಕೆಲವರಿದ್ದಾರಯ್ಯ ನನಗೆ ಪ್ರಿಯಮಿತ್ರರು; ಆದರೂ ಇದ್ದಾನೆ ಶತ್ರು ಒಬ್ಬನೇ– ಆ ಅವನು ನಾನೇ!

–ಜಿ.ಎಸ್.ಶಿವರುದ್ರಪ್ಪ

★ ವಿವೇಕಿಗಳು ಅಪಾಯದ ಸಮಯದಲ್ಲಿ ಏನನ್ನೂ ಹೇಳರು.

–ಜಾನ್ ಸೆಲ್ಡನ್

★ ಹಣಕ್ಕೆ ದಾನ, ಅನುಭವ ಮತ್ತು ನಾಶ ಎಂಬ ಮೂರು ಗತಿಗಳಾಗುತ್ತವೆ. ಯಾರು ಕೊಡುವುದೂ ಇಲ್ಲವೋ, ಅನುಭವಿಸುವುದೂ ಇಲ್ಲವೋ– ಅಂಥವನ ಹಣಕ್ಕೆ ಮೂರನೆಯ ಗತಿ ಆಗುತ್ತದೆ.

–ಪಂಚತಂತ್ರ

★ ತಪ್ಪು ಮಾಡಿದವನಿಗೆ ಶಿಕ್ಷೆ ಆಗದಿದ್ದರೂ ಸರಿ, ನಿರಪರಾಧಿಗೆ ಶಿಕ್ಷೆ ಆಗಬಾರದು.

–ವಾಲ್ಟೇರ್